ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 10-15
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕುವೆಂಪು ಕಾದಂಬರಿಗಳಲ್ಲಿ ಜೀತ ಪದ್ಧತಿಯ ಚಿತ್ರಣ

**ಮಣೆಗಾರ ಲಕ್ಷ್ಮಣ ಮಣೆಗಾರ ನಾಗಪ್ಪ**
ಸಂಶೋಧನಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

***Abstract:***
*ಜೀತ ಪದ್ಧತಿಯು ವರ್ಗ ಸಂಘರ್ಷದ ಭಾಗವಾಗಿದ್ದು ಊಳಿಗಮಾನ್ಯಶಾಹಿ ವ್ಯವಸ್ಥೆಯೊಳಗೆ ಅಹಿಂಸೆ, ಅಶಾಂತಿ, ಮೌನ ಸಂಘರ್ಷದ ಪ್ರತಿಭಟನೆಗಳು ಒಳಗೊಳಗೆ ಅಂತರ್ಗರ್ಭೀಕರಿಸಿಕೊಂಡಿವೆ. ಊಳಿಗಮಾನ್ಯಶಾಹಿ ವ್ಯವಸ್ಥೆಯ ಶೋಷಣೆಯ ಸ್ವರೂಪವನ್ನು ಜಮೀನ್ದಾರಿಶಾಹಿ, ಬಂಡವಾಳಶಾಹಿಗಳ ಪಾಳೆಗಾರಿಕೆಯ ಮನೋಭಾವವನ್ನು ಅಭಿವ್ಯಕ್ತಿಸಿರುವುದನ್ನು ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಹಾಗೂ ಕಾನೂರು ಹೆಗ್ಗಡತಿ ಈ ಎರಡೂ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕುವೆಂಪು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಜೀತಪದ್ಧತಿ.*

## ಪೀಠಿಕೆ

ಜೀತ ಎಂಬ ಪದವು ಸಂಸ್ಕೃತ ಪದದಿಂದ ನಿಷ್ಪತ್ತಿ ಹೊಂದಿದ್ದು, 'ಗೆಲ್ಲಲ್ಪಟ್ಟವ', ಜಯಶಾಲಿಯಾದವ ಎಂಬ ಅರ್ಥವನ್ನು ಕೊಡುತ್ತದೆ. ಪ್ರಾಚೀನ ಭಾರತದ ಯುದ್ಧ ಸಂದರ್ಭದಲ್ಲಿ ಸೆರೆಯಾಳುಗಳನ್ನಾಗಿ ಬಂಧಿಸಿದ ಶತ್ರು ಸೈನಿಕರನ್ನು 'ಜೀತ' ಎಂದು ಕರೆಯುತ್ತಾ ಅವರಿಂದ ಬಿಟ್ಟಿ ಚಾಕರಿಯನ್ನು ಮಾಡಿಸಿಕೊಳ್ಳುತ್ತಿದ್ದರು. ಜೀತ ಪದ್ಧತಿಯು ವರ್ಗ ಸಂಘರ್ಷದ ಭಾಗವಾಗಿದ್ದು ಊಳಿಗಮಾನ್ಯ ವ್ಯವಸ್ಥೆಯೊಳಗೆ ಅಹಿಂಸೆ, ಅಶಾಂತಿ, ಮೌನ ಸಂಘರ್ಷದ ಪ್ರತಿಭಟನೆಗಳು ಒಳಗೊಳಗೆ ಅಂತರ್ಗರ್ಭೀಕರಿಸಿಕೊಂಡಿವೆ. ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯ ಸ್ವರೂಪವನ್ನು ಜಮೀನ್ದಾರಿ–ಶಾಹಿ, ಬಂಡವಾಳಶಾಹಿಗಳ ಪಾಳೆಗಾರಿಕೆಯ ಮನೋಭಾವವನ್ನು ಅಭಿವ್ಯಕ್ತಿಸಿರುವುದನ್ನು ಕುವೆಂಪು ಅವರ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಮಲೆನಾಡಿನ ಪ್ರದೇಶದ ಜನಸಾಮಾನ್ಯರ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಭೂ ಒಡೆಯರು, ಜೀತದಾಳು, ಸವರ್ಣೀಯ ಅಸ್ಪೃಶ್ಯ, ಹೆಣ್ಣು–ಗಂಡು, ಮೇಲ್ವರ್ಗ ಕೆಳವರ್ಗ ಎಂಬ ಸಂಬಂಧಗಳನ್ನು ಕಾದಂಬರಿಯಲ್ಲಿ ಗುರುತಿಸಬಹುದು. ಭೂಮಾಲೀಕರಾಗಿದ್ದ ಜಮೀನ್ದಾರರ ದರ್ಪ, ದೌರ್ಜನ್ಯ, ಕ್ರೌರ್ಯದ ಬಗೆಗಿನ ಚಿತ್ರಣ ಕಾದಂಬರಿಯಲ್ಲಿ ಓದುಗರ ಮನ: ಕಲಕುವಂತೆ ನಿರೂಪಿತಗೊಂಡಿದೆ. ಕುವೆಂಪು ಅವರು ತಮ್ಮ ಕಾದಂಬರಿಗಳಲ್ಲಿ ದಲಿತರು ಎದುರಿಸುತ್ತಿದ್ದಂತಹ ಜಾತಿ, ಜೀತಪದ್ಧತಿ, ಅಸ್ಪೃಶ್ಯತೆಯ ಹಲವಾರು ನೆಲೆಗಳನ್ನು ಚಿತ್ರಿಸಿದ್ದಾರೆ.

## ಜೀತ ಪದ್ಧತಿಯ ಹಿನ್ನಲೆ

ಭಾರತವು ಕೃಷಿ ಪ್ರಧಾನವಾದ ದೇಶವಾಗಿದ್ದು, ಪ್ರಾಚೀನ ಕಾಲದಿಂದಲೂ ಸರಕಾರಗಳು ರೈತರು ಉತ್ಪಾದಿಸಿದ ಉತ್ಪನ್ನದ ಒಂದು ಭಾಗವನ್ನು

***Please cite this article as:*** ಮಣೆಗಾರ ಲಕ್ಷ್ಮಣ ಮಣೆಗಾರ ನಾಗಪ್ಪ. (2023). ಕುವೆಂಪು ಕಾದಂಬರಿಗಳಲ್ಲಿ ಜೀತ ಪದ್ಧತಿಯ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 10–15.

ಕಂದಾಯವಾಗಿ ವಸೂಲಿ ಮಾಡುತ್ತಿದ್ದವು. ಜಮೀನ್ದಾರಿ ಪದ್ಧತಿಯನ್ನು ಕುರಿತು ಕನ್ನಡ ವಿಶ್ವಕೋಶದಲ್ಲಿ "ಮೊಘಲರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ವ್ಯಾಪಕವಾಗಿ ಜಾರಿಯಲ್ಲಿದ್ದು ಈ ಪದ್ಧತಿ ಹುಟ್ಟಿಕೊಂಡಿತು. ಮೊಗಲ್ ಸಾಮ್ರಾಜ್ಯ ಕ್ಷೀಣಿಸತೊಡಗಿದಾಗ ದೆಹಲಿಯ ಸರ್ಕಾರ ತನ್ನ ಸಾಮ್ರಾಜ್ಯದ ಪ್ರಾಂತ್ಯಗಳಲ್ಲಿದ್ದ ಕಂದಾಯ ವಸೂಲಿ ಅಧಿಕಾರಿಗಳ ಮೇಲೆ ಸರಿಯಾದ ಹತೋಟಿ ಇಟ್ಟುಕೊಳ್ಳುವುದು ಸಾಧ್ಯವಾಗದೆ ಹೋಯಿತು. ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ವರಮಾನ ತಪ್ಪದಂತೆ ಯಾವುದಾದರೊಂದು ವ್ಯವಸ್ಥೆಯನ್ನು ರೂಪಿಸಿಕೊಳ್ಳುವುದು ಅಗತ್ಯವೆನಿಸಿತು. ಈ ಹಿನ್ನಲೆಯಲ್ಲಿ ಫರೂಕ್ ಸಿಯಾರನ ಆಳ್ವಿಕೆಯ ಕಾಲದಲ್ಲಿ (1713–1719) ಜಮೀನ್ದಾರಿ ಪದ್ಧತಿ ಖಚಿತವಾಗಿ ರೂಪುಗೊಂಡಿತು ಎನ್ನಬಹುದು."[1] ಎಂದು ಉಲ್ಲೇಖಿಸಲಾಗಿದೆ.

ಭಾರತೀಯ ಅರ್ಥಶಾಸ್ತ್ರಜ್ಞರಾದ ಮಿಶ್ರ ಮತ್ತು ಪುರಿ ಅವರು ಜಮೀನ್ದಾರಿ ವ್ಯವಸ್ಥೆಯನ್ನು ಕುರಿತು ವಿಶ್ಲೇಷಿಸುತ್ತಾ *"Zamindary system was created by the East India Company When in 1793. Lord Corn-Wallis entered into 'permanent settlement' with land lords with a view to increasing revenue of the company. Under the settlement the land lord (Known as Zamindars) were declared full proprietors of large areas of land"*[2] ಎಂದು ವಿಶ್ಲೇಷಿಸಿದ್ದಾರೆ. ಇಂತಹ ಜಮೀನ್ದಾರಿ ವ್ಯವಸ್ಥೆಯ ಅಡಿಯಲ್ಲಿ ಜೀತದಾಳುಗಳಾಗಿ ದುಡಿಯುತ್ತಿರುವಂತಹ ಭೂರಹಿತ ಕೃಷಿ ಕೂಲಿ ಕಾರ್ಮಿಕ ವರ್ಗವು ತುತ್ತು ಗಂಜಿಗಾಗಿ ತಮ್ಮ ಜೀವ–ಜೀವನವನ್ನೆ ಜೀತಕ್ಕಾಗಿ ಮುಡಿಪಾಗಿಟ್ಟು ಶ್ರಮಿಸುತ್ತಿದ್ದರು. ಪ್ರಾಚೀನ ಭಾರತದಲ್ಲಿ ಯುದ್ಧದ ಸಂದರ್ಭದಲ್ಲಿ ಸೆರೆಯಾಳುಗಳನ್ನಾಗಿ ಬಂಧಿಸಿದ ಶತ್ರು ಸೈನಿಕರನ್ನು 'ಜೀತ' ಎಂದು ಕರೆಯುತ್ತಾ ಅವರಿಂದ ಬಿಟ್ಟಿಚಾಕರಿಯನ್ನು ಮಾಡಿಸಿಕೊಳ್ಳುತ್ತಿದ್ದರು.

**ಕುವೆಂಪುರವರ ಕಾದಂಬರಿಗಳಲ್ಲಿ ಜೀತಪದ್ಧತಿ**

ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ ವಸ್ತುಗಳು ಹತ್ತೊಂಬತ್ತನೆಯ ಶತಮಾನದವುಗಳಾಗಿದ್ದು ಕುವೆಂಪು ಅವರಿಗೆ ಸಮಕಾಲೀನವಾಗಿರದೆ ಸುಮಾರು ಒಂದು ತಲೆಮಾರಿನ ಹಿಂದಿನ ವಸ್ತುಗಳ ಸ್ಥಿತಿಗತಿಗಳನ್ನು ಕುರಿತ ಮಾಹಿತಿಯನ್ನು ಒಳಗೊಂಡಿದೆ. ಕುವೆಂಪು ಅವರು ರಾಮಕೃಷ್ಣಾಶ್ರಮದಲ್ಲಿ ಬಾಲ್ಯದಿಂದ ಹಿಡಿದು ಉನ್ನತ ವಿದ್ಯಾಭ್ಯಾಸದವರೆಗೂ ಮಲೆನಾಡಿನ ಪ್ರದೇಶದ ದಲಿತರೊಂದಿಗಿನ ಸಾಮಾಜಿಕ ಸ್ಥಿತಿಗತಿಗಳನ್ನು ಮರಕ್ಕೆ ಬೇರು ಅಂಟಿಕೊಂಡಿರುವಂತೆ ಅಲ್ಲಿನ ಭೂ ಒಡೆಯರ ಸುತ್ತ ಜಮೀನ್ದಾರರನ್ನು ಆಶ್ರಯಿಸಿಕೊಂಡು ಜೀವನ ಸಾಗಿಸುತ್ತಿರುವ ಜೀತಗಾರರ ಜೀವನವನ್ನು ಚಿತ್ರಿಸಲು ಸಾಧ್ಯವಾಗಿದೆ ಎಂಬುದು ದಲಿತ ಹೋರಾಟಗಾರ ಬಿ. ಕೃಷ್ಣಪ್ಪ ಅವರ ನಿಲುವಾಗಿದೆ.

ಕುವೆಂಪು ಕಾದಂಬರಿಗಳಲ್ಲಿ ಬಹುಮುಖ್ಯವಾಗಿ ನಾಲ್ಕು ಜಾತಿಗಳು ಕಾಣಿಸಿಕೊಳ್ಳುತ್ತವೆ. ಬ್ರಾಹ್ಮಣರು, ಗೌಡರು (ಒಕ್ಕಲಿಗರು), ಮುಸ್ಲಿಮರು, ಕ್ರಿಶ್ಚಿಯನ್ನರು ಇತರೆ ಕೆಳಜಾತಿಗಳು. ಬ್ರಾಹ್ಮಣರು ಬೆವರಿಳಿಸಿ ದುಡಿಯುವವರಲ್ಲ. ಹಳ್ಳಿಯ ನಿರಕ್ಷರಕುಕ್ಷಿಗಳಿಗೆ ಮೌಢ್ಯತೆಯನ್ನು ಉಪದೇಶಿಸಿ ವಿಭೂತಿ ಕೊಡುತ್ತಿದ್ದರು. ಜನ ಸಾಮಾನ್ಯರು ಖಾಯಿಲೆಗೆ ತುತ್ತಾದರೆ ಔಷಧಿ ಕೊಡುವ ಬದಲು ಬೂದಿ, ಕುಂಕುಮ ಹಚ್ಚಿ ಮಂತ್ರ ತಂತ್ರಗಳನ್ನು ಪಠಿಸುವುದರ ಮೂಲಕ ಜನಸಾಮಾನ್ಯರನ್ನು ಶೋಷಿಸುತ್ತಿದ್ದರು. ಇವರಿಗೆ ವೇದ, ಶಾಸ್ತ್ರ ಪುರಾಣಗಳ ಬಂಡವಾಳವಾಗಿದ್ದವು. ಒಕ್ಕಲಿಗರು ಮಾತ್ರ ಭೂ ಒಡೆಯರಾಗಿದ್ದರು ಹಾಗೂ ಇವರನ್ನು ಬಿಟ್ಟು ಬೇರೆ ಯಾರೂ ಸಹ ಭೂ ಒಡೆಯರಾಗಬಾರದು ಎಂಬುದು ಇವರ ನಿಲುವಾಗಿತ್ತು. ಬೇರೆ ಯಾರಾದರೂ ಇವರ ವಿರುದ್ಧವಾಗಿ ಭೂಮಿಯನ್ನು ಸಾಗುವಳಿ ಮಾಡಲು ಹೊರಟರೆ ಜೀತಗಾರರಾದ

ಹಳೆಪೈಕದ ಸೇಸನಾಯ್ಕರ ಮೇಲೆ ಅವರಿಗೆ ಜಿದ್ದು. ಬ್ರಾಹ್ಮಣರನ್ನು ಹೊರತುಪಡಿಸಿದರೆ ಇವರೇ ಉತ್ತಮ ಜಾತಿಯವರಾಗಿದ್ದರು. ಇಲ್ಲಿನ ಬಿಲ್ಲವರು, ಹಸಲರು, ಕುಂಬಾರರು, ಹಳೆಪೈಕದವರು ಮುಂತಾದವರು ಭೂ ಒಡೆಯರ ಹೊಲಗದ್ದೆಗಳಲ್ಲಿ ದುಡಿಯುವ ಜೀತಗಾರರಾಗಿದ್ದರು. ಬ್ರಾಹ್ಮಣರು ಸಮಾಜದ ಎಲ್ಲಾ ವರ್ಗಗಳನ್ನು ಬೌದ್ಧಿಕವಾಗಿ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರೆ ಒಕ್ಕಲಿಗರು ಆರ್ಥಿಕವಾಗಿ ಅದಕ್ಕಿಂತಲೂ ಕೆಳವರ್ಗದವರನ್ನು ತಮ್ಮ ಬಿಗಿಹಿಡಿತದಲ್ಲಿ ಇಟ್ಟುಕೊಂಡಿದ್ದರು. ಇಲ್ಲಿನ ಕೂಲಿ ಆಳುಗಳಾಗಲಿ ಅಥವಾ ಜೀತಗಾರರೇ ಇರಲಿ ಇವರ ವಿರುದ್ಧವಾಗಿ ನಡೆದುಕೊಂಡರೆ ಮುಸ್ಲಿಮರನ್ನು ಬಳಸಿಕೊಂಡು ಹೊನ್ನಾಳಿ ಹೊಡೆತದ ಮೂಲಕ ತಾವು ಹೇಳಿದ ಹಾಗೆ ಕೇಳುವಂತೆ ಮಾಡಿಕೊಳ್ಳುತ್ತಿದ್ದರು.

ಗೌಡರು ಭೂಮಿಯನ್ನು ಭಾಗ ಮಾಡಿಕೊಳ್ಳುವಂತೆ ಜೀತದಾಳುಗಳನ್ನು ಭಾಗ ಮಾಡಿಕೊಳ್ಳುತ್ತಿದ್ದರು. "ಬ್ರಾಹ್ಮಣ ಬೌದ್ಧಿಕ ಶೋಷಣೆಯ ಒಂದು ಮುಖವಾದರೆ, ಗೌಡರು ಆರ್ಥಿಕ ಶೋಷಣೆಯ ಇನ್ನೊಂದು ಮುಖ ಎನ್ನಲಾಗಿದೆ. ಮೇಲ್ನೋಟಕ್ಕೆ ಎರಡೂ ಕಾದಂಬರಿಗಳು ಜಮೀನ್ದಾರರು ಮತ್ತು ಅವರ ಮಕ್ಕಳ ಏಳುಬೀಳಿನ ಕಥಾಹಂದರವುಳ್ಳವು"[3] ಎಂದು ವಿಮರ್ಶಕರಾದ ರಹಮತ್ ತರೀಕೆರೆ ಅವರ ನಿಲುವು ಸಹಜವಾಗಿದೆ. ಚಂದ್ರಯ್ಯಗೌಡರ ಸಾಲಗಾರರು ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳುವ ಪ್ರಸಂಗವೊಂದು ಮಾರ್ಮಿಕವಾಗಿ ಮೂಡಿಬಂದಿದೆ. ಚಂದ್ರಯ್ಯಗೌಡರ ಭೂಮಿಯಲ್ಲಿ ಒಕ್ಕಲಾಗಿ ದುಡಿಯುವ ಶ್ರಮಿಕರಾದ ಅಣ್ಣಯ್ಯಗೌಡರು ಚಿಕ್ಕಾಸೂ ಸಿಗದೆ ಜಮೀನ್ದಾರರಿಂದ ಛೀಮಾರಿ ಹಾಕಿಸಿಕೊಂಡು ಹಿಂದಿರುಗಿದರೆ, ಸತ್ಯನಾರಾಯಣ ವ್ರತವನ್ನು ಹೇಳುತ್ತಾ ತಮ್ಮ ಖರ್ಚನ್ನು ವಸೂಲಿ ಮಾಡಿಕೊಳ್ಳುವ ವೆಂಕಪ್ಪ ಜೋಯಿಸರ ಕಾರ್ಯತಂತ್ರ ಕಾಣಬಹುದು. ಅವರು ಮಾಡುವ ಉಪದೇಶ ಹೀಗಿದೆ "ನಾನು ಹೇಳಿದ್ದೆ ನಿನಗೆ ಮೊದಲೇ ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡುತ್ತದೆ ಎಂದು. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ, ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ"[4] ಶೂದ್ರವರ್ಗದ ಮೇಲೆ ಒತ್ತಾಯಪೂರ್ವಕವಾಗಿ ಜಮೀನ್ದಾರಿಶಾಹಿ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಹೇರುವುದು ಕಂಡುಬಂದಿದೆ. ಜಮೀನ್ದಾರಿ ವರ್ಗವು ಜೀತದಾಳುಗಳಿಂದ ಬಿಟ್ಟಿಚಾಕರಿಯನ್ನು ಮಾಡಿಸಿಕೊಳ್ಳುವುದಲ್ಲದೆ ಜಾತಿ ಶೋಷಣೆಯನ್ನು ಮಾಡುತ್ತಿರುವುದು ಕಾದಂಬರಿಯಲ್ಲಿ ಕಂಡುಬರುತ್ತದೆ. "ಈ ಸೂಳೆ ಮಕ್ಕಳಿಗೆ ಏನು ಮಾಡಬೇಕಾಯಿತು. ಒಂಭತ್ತು ಗಂಟೆಗೆ ಕೆಲಸಕ್ಕೆ ಹೊರಡ್ತಾರೆ! ಹತ್ತು ಗಂಟೆಗೆ ಕೆಲಸ ಬಿಡ್ತಾರೆ! ಎಂದು, ಗಟ್ಟಿಯಾಗಿ ಕೂಗಿದರು. ಏ, ಬೈರಾ! ನಿಮ್ಮ ಬಿಡಾರಕ್ಕೆ ಬೆಂಕಿ ಬೀಳಾ! ಇಷ್ಟು ಬೇಗನೆ ಆರು ಬಿಟ್ಟು ಗುಡೀಗೆ ಸಾಯ್ತಿರೇನೋ."[5] ಎಂದು ಪ್ರತಿಭಟಿಸಿದರು. ಜಮೀನ್ದಾರರು ಜೀತಗಾರರ ಮೇಲೆ ನಡೆಸುವ ದರ್ಪ, ದೌರ್ಜನ್ಯ, ದಬ್ಬಾಳಿಕೆ, ಶೋಷಣೆಯ ನೆಲೆಗಳನ್ನು ಗುರುತಿಸಬಹುದಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಂಡುಬರುವ ರಂಗಪ್ಪಗೌಡರು ಚಿಂಕ್ರನು ಪಡೆದ ಸಾಲಕ್ಕೆ ಅಕ್ಕಣೆಯ ಕಡೆಯಿಂದ ಆಣೆಮಾಡಿಸಿ ಕೊಳ್ಳುವುದು ದೆವ್ವ– ಭೂತಾದಿಗಳು, ಜಮೀನ್ದಾರರು, ಆಸ್ತಿ ರಕ್ಷಣೆಗೆಂದು ಸ್ಥಾಪಿಸಿಕೊಂಡಿರುವ ಕಾನೂನು, ಪೋಲಿಸುಗಳಂತೆ ಕಾರ್ಯನಿರ್ವಹಿಸುತ್ತವೆ. ಕಾದಂಬರಿಯಲ್ಲಿ ಕಂಡುಬರುವ ಕಲ್ಲೂರು ಮಂಜಭಟ್ಟರು ದೇವರೊಂದಿಗೆ ಸಂವಾದಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ತಮ್ಮದು ಏನೂ ತಪ್ಪಿಲ್ಲದಿದ್ದರೂ ಕೂಡ ಕೆಳವರ್ಗದ ಜೀತದಾಳುಗಳೆಲ್ಲ ಪೋಲೀಸು ಲಾಕಪ್ಪುಗಳಿಗೆ ಗಡಗಡ ನಡುಗುವಂತೆ ಮಾಡಿವೆ. ಜಮೀನ್ದಾರರ ಕ್ರೌರ್ಯ, ಆಕ್ರೋಶ, ದರ್ಪ, ದೌರ್ಜನ್ಯಗಳು ದುಡಿಯುವ ಶ್ರಮಿಕ ವರ್ಗದ ಮೇಲೆ ದಮನೀಯ ಚಿತ್ರಣವು

ಲೇಖಕರ ಸಂಯಮವು ಕ್ರೌರ್ಯದ ಉದ್ದೇಶತೆಯನ್ನು ಹೆಚ್ಚಿಸಿದೆ. ಯಾರೋ ನೇಗಿಲು ಮುರಿದದ್ದಕ್ಕೆ ಇನ್ಯಾರೋ ಅನುಭವಿಸುವ ಜೀತಗಾರನಾದ ಬೇಲರ ಸಿದ್ದನಿಗೆ ಆಗುವ ಶಿಕ್ಷೆ, ಸಣ್ಣಬೀರನಿಗೆ ಬೀಳುವ 'ಹೊನ್ನಾಳಿ ಹೊಡೆತ' ಇವೆಲ್ಲವುಗಳು ಉಳಿಗಮಾನ್ಯಶಾಹಿ ವ್ಯವಸ್ಥೆಯ ನಿದರ್ಶನಗಳೆಂಬಂತೆ ಕಾದಂಬರಿಯಲ್ಲಿ ಮೂಡಿಬಂದಿವೆ.

ಜೀತದಾಳು ಹೊಲೆಯನೊಬ್ಬನ ತಪ್ಪಿಗಾಗಿ ಎದೆಯ ಮೇಲೆ ಹಲಗೆ ಹಾಕಿ ಮೆಟ್ಟಿಸಿ ರಕ್ತಕಾರಿ ಜೀವ ಬಿಡುವ ಪ್ರಸಂಗವು ಒಂದು ಕಡೆ ಕಂಡುಬರುತ್ತದೆ. ಕಾದಂಬರಿಯಲ್ಲಿ ಕಂಡುಬರುವ ಜೀತದಾಳು ದೇಯಿಯ ಸಾವನ್ನು ಒಡೆಯರಾದ ರಂಗಪ್ಪಗೌಡರು ತಣ್ಣಗೆ ಸ್ವೀಕರಿಸುವ ದೃಶ್ಯವಂತೂ ಹೃದಯ ವಿದ್ರಾವಕವಾಗಿದೆ. ಮನೆಯನ್ನು ಭಾಗಮಾಡುವಾಗ ಮನೆಯಲ್ಲಿನ ಪಾತ್ರೆ ಪಗಡೆಗಳನ್ನು ಭಾಗಮಾಡಿಕೊಳ್ಳುವಂತೆ ಅಲ್ಲಿನ ಜೀತದಾಳುಗಳನ್ನು ಪಾಲು ಮಾಡುತ್ತಾರೆ. ಇಲ್ಲಿ ಖಾಸಗಿ ಆಸ್ತಿಗೆ ಎರಡು ಶಕ್ತಿಗಳಿದ್ದು ಅದು ಜಮೀನ್ದಾರರಲ್ಲಿ ದರ್ಪ, ಕ್ರೌರ್ಯವನ್ನು ತುಂಬಿದರೆ, ಜನಸಾಮಾನ್ಯರಲ್ಲಿ ದಿಟ್ಟತನದ ಸ್ವಾಭಿಮಾನವನ್ನು ತುಂಬುತ್ತದೆ. ಇಲ್ಲಿನ ಯಾರು ಸಹ ಹಳೆಪೈಕದ ದಂಡಿಗೆ ಹತ್ತುವಂತಿಲ್ಲ ಎನ್ನುವ ಕಟ್ಟಾದೇಶವನ್ನು ಭೂರಹಿತರಾದ ಹಳೆಪೈಕದ ಒಕ್ಕಲುಗಳೂ, ಜೀತದಾಳುಗಳೂ ಪ್ರತಿಭಟಿಸದೆ ಸೇಸನಾಯ್ಕನಂತಹ ಸ್ವಂತ ಜಮೀನು ಉಳ್ಳವರು ಮಾತ್ರ ಪ್ರತಿಭಟಿಸುತ್ತಾರೆ. ಆದರೆ ಆಸ್ತಿ ಇಲ್ಲದವರ ಭೂರಹಿತ ವರ್ಗಗಳ ಛಲಗಳು ವ್ಯವಸ್ಥೆಯ ಕಣ್ಣಿಗೆ ಅಹಂಕಾರದಂತೆ ತಲೆದೋರುತ್ತವೆ.

ಕಾಗೋಡು ಸತ್ಯಾಗ್ರಹದ ಅಧ್ಯಯನದಲ್ಲಿ ಜಿ. ರಾಜಶೇಖರ್ ಅವರು ಮಲೆನಾಡಿನ ಭಾಗದ ಜೀತದಾಳುಗಳ ಬಗ್ಗೆ ಕೊಡುವ ವಿವರಗಳು ಹೀಗಿವೆ. "ಅಲ್ಲಿನ ಸೇರೆಗಾರರೂ, ಜಮೀನ್ದಾರರೂ, ಅಕ್ಷರಶ: ಜೀತಗಾರರನ್ನು ಪ್ರಾಣಿಗಳಂತೆ ನಡೆಸಿಕೊಂಡಿದ್ದಾರೆ. ಕಾನೂರಿನ ಜಮೀನ್ದಾರರಾದ ಸಿಂಗಪ್ಪಗೌಡರಿಗೂ ಚಂದ್ರಯ್ಯಗೌಡರಿಗೂ ಕೂಲಿ ಆಳಿನ ವಿಚಾರದಲ್ಲಿ ಮನಸ್ತಾಪ ಆದಂತೆ, ಬೆಟ್ಟಳ್ಳಿಯವರಿಗೂ ಸಿಂಭಾವಿ ಮನೆಯವರಿಗೂ ಕೂಲಿ ಆಳಿನ ವಿಚಾರದಲ್ಲಿ ಮನಸ್ತಾಪ ಉಂಟಾಗಿದ್ದು, ಗುತ್ತಿ ಮದುವೆಯಲ್ಲಿ ಅದು ಮತ್ತೆ ಅನುರಣಿಸುತ್ತದೆ. ತನ್ನ ಹೊಲೆಯಾಳಿನ ಹೆಂಡತಿಯನ್ನು ಜಮೀನ್ದಾರನೊಬ್ಬನು 'ಅವಸರ ನಿಮಿತ್ತವಾಗಿ ಮೂರು ವರಹಗಳಿಗೆ ಮತ್ತೊಬ್ಬ ಜಮೀನ್ದಾರನಿಗೆ ಮಾರಾಟ ಮಾಡಿದ ಬಗೆಗೆ ಇರುವ ತಾಮ್ರ ಶಾಸನವೂ ಇದೇ ಪ್ರಾಂತಕ್ಕೆ ಇದೇ ಕಾಲಕ್ಕೆ ಸೇರಿದುದು ಎಂದಿದ್ದಾರೆ."[6] ಕುಟುಂಬದ ಭಾವನಾತ್ಮಕ ಸಂಬಂಧಗಳನ್ನು ಖಾಸಗೀಯಾಗಿ ಪ್ರೀತಿ ಪ್ರೇಮಕ್ಕೂ ಜಮೀನ್ದಾರರ ಲಾಭ–ನಷ್ಟಗಳ ದೃಷ್ಟಿಯಲ್ಲಿ ನಿರ್ಧಾರವಾಗುವುದನ್ನು ಕಾದಂಬರಿಕಾರರು ವಿಶ್ಲೇಷಿಸಿರುವ ಪರಿ ಅಭಿವ್ಯಕ್ತಗೊಂಡಿದೆ.

"ಭೂಒಡೆಯರಿಗೆ ಬೇಕಾಗಿರುವುದು ಜೀತ ಮಾಡಲು ಒಂದು ಆಳು. ತಮ್ಮ ಹೊಲಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದು ಆಳು ಖೋತ ಬೀಳುತ್ತದೆ. ಆದ್ದರಿಂದ ಕೇರಿಯ ಹೆಣ್ಣನ್ನು ಕೇರಿಯ ಗಂಡೆ ಮದುವೆಯಾಗಬೇಕು ಎಂಬುದು ಅವರ ಕಟ್ಟಪ್ಪಣೆ, ಬೇರೆ ರೀತಿಯಿಂದ ವರ್ತಿಸಿದರೆ ಆ ಹೆಣ್ಣು ಇನ್ನೊಬ್ಬ ಬೇರೆ ಹಳ್ಳಿಯ ಕೇರಿಯವನಿಂದ ತಾಳಿ ಕಟ್ಟಿಸಿಕೊಂಡಿದ್ದರೂ ಸರಿ, ಅವಳನ್ನು ಎಳೆದು ತರಿಸಿ, ತಾಳಿ ಕೀಳಿಸಿ, ತಮ್ಮ ಕೇರಿಯಯವನಿಗೆ ಮದುವೆ ಮಾಡಿಸುತ್ತಿದ್ದರು ಎಂಬುವುದರಲ್ಲಿ ಸಂದೇಹವಿರಲಿಲ್ಲ. ಅಪ್ಪಿ ತಪ್ಪಿ ಒಡೆಯರ ಇಚ್ಛೆಗೆ ವಿರೋಧವಾಗಿ ನಡೆದವರಿಗೆ ಹಿಂದೆ ಅಂತಹ ಗತಿಯೇ ಒದಗಿತ್ತು. ಕೀಳುಜಾತಿಯವರಿಗೆ ಅವರ ಇಚ್ಛಾನುಸಾರ ಒಲವು ಅಕ್ಕರೆ ಇರುವುದೆಂದರೇನು?"[7] ಆರ್ಥಿಕ ಸಂಕಷ್ಟದಲ್ಲಿರುವ ಭೂರಹಿತ ಜೀತದಾರರಿಗೆ ಸಾಲಕೊಡುವ ಮೂಲಕ ಇಲ್ಲಿನ ಜಮೀನ್ದಾರರು ಶ್ರಮಿಕರಾದ ದುಡಿಯುವ ವರ್ಗದ ಬದುಕನ್ನು ತಿದ್ದುವರಾಗಿದ್ದರು. ಇಲ್ಲಿನ ಪ್ರತಿಯೊಬ್ಬ ಜೀತದ ಆಳುಗಳೂ ಸಹ ತಮ್ಮ ಪೂರ್ವಜರು ಮಾಡಿದ

ಸಾಲಕ್ಕೆ ಬಾಕಿದಾರರೇ ಆಗಿದ್ದು ಅನಿವಾರ್ಯ ಬೆಳವಣಿಗೆ ಎನ್ನುವಂತೆ ಹಣ ವಸೂಲಿ ಮಾಡುವ ಜಮೀನ್ದಾರರ ಕ್ರೌರ್ಯಗಳಾಗಿವೆ.

ಜಮೀನ್ದಾರರ ಕೋಪೋದ್ರೇಕಗಳು ಪ್ರಾತಿನಿಧಿಕ ಆಯುಧಗಳಾಗಿ ಕೆಲಸ ಮಾಡುವ ಇಲ್ಲಿನ ಕಿಲಿಸ್ತರ ಜಾಕಿ ಅಥವಾ ಪುಂಡು ಸಾಬರ ಕ್ರೌರ್ಯಕ್ಕೂ ಅವರ ಮಾತುಗಳಿಗೂ ಏನು ಪರಸ್ಪರ ಸಂಬಂಧವಿರದೇ ಇದ್ದರೂ ಸಹ ಸಾಮಾಜಿಕವಾಗಿ ಹಿಂದುಳಿದಿರುವ ಮತ್ತು ಅವರಲ್ಲಿನ ಅಜ್ಞಾನದಿಂದಾಗಿ ಇವರೆಲ್ಲರೂ ಚಾಂಡಾಲ ಸೇವೆಯನ್ನು ಮಾಡುತ್ತಾರೆ. ಮಲೆನಾಡಿನ ಪ್ರದೇಶದಲ್ಲಿ ಆರ್ಥಿಕವಾಗಿ ಸಣ್ಣಪಟ್ಟ ರೈತ ವರ್ಗಗಳು ಹೆಚ್ಚು ಕಡಿಮೆ ಇರುವುದಿಲ್ಲ. ಬಹುದೊಡ್ಡ ಜಮೀನ್ದಾರರು ಮತ್ತು ಅಪಾರ ಸಂಖ್ಯೆಯ ಭೂರಹಿತ ಜೀತದಾಳುಗಳು ಮಾತ್ರ ಇದ್ದಾರೆ.

ಕಾದಂಬರಿಯಲ್ಲಿ ಜೀತದಾಳುಗಳ ಬದುಕಿನ ಬಹಿರ್ ವ್ಯಾಪಾರವನ್ನು ಕುವೆಂಪು ಅವರು ಬಹಳ ಕುತೂಹಲಕಾರಿಯಾಗಿ ಚಿತ್ರಿಸಿದ್ದಾರೆ. ಇಲ್ಲಿನ ಬೇಲರ ವೈರ ಕದ್ದು ಮುಚ್ಚಿ ಹೆಂಡ ಕಾಯಿಸುವುದು, ಕಿಲಿಸ್ತರ ಮಾರ್ಕನಿಗೆ ಮೋಸಗೊಳಿಸುವಿಕೆ, ಗಂಗನ ಮಗ ಭೂತದ ಭೀತಿಯಿಂದ ಸಾವನ್ನಪ್ಪುವುದು, ಹೊಲಗೇರಿಯ ಕೊಳಕು, ಬಡಕಲು, ನಾಯಿಗಳು ಬೆಳಗಿನ ಬಿಸಿಲು ಕಾಯಿಸುತ್ತಾ ಹೇನು ಕೂರೆ ಕುಕ್ಕುವ ಹೊಲೆಯರು, ಗುತ್ತಿ ತಿಮ್ಮಿಯನ್ನು ಓಡಿಸಿಕೊಂಡು ಹೋಗುವುದು, ಗುತ್ತಿ ಪೊಲೀಸರಿಂದ ತಪ್ಪಿಸಿಕೊಂಡು ಹೋಗುವುದು, ಕಲ್ಲೇಗೌಡರ ಆದೇಶದಂತೆ ಇಜಾರರ ಸಾಬು ಸಣ್ಣಬೀರನನ್ನು ಕಟ್ಟಿ ಹುಣಸೆ ಬರಲಿನಿಂದ ಹೊಡೆಯುವುದು, ಗುತ್ತಿ ನಾಯಿ ಹುಲಿಯ ಪ್ರವಾಹದಲ್ಲಿ ಕೊಚ್ಚಿ ಹೋಗುವುದು ಇಂತಹ ಇನ್ನು ಮುಂತಾದ ಹತ್ತು ಹಲವಾರು ಸಂದರ್ಭಗಳು ಜೀತದಾಳುಗಳ ಸಾಮಾಜಿಕ ಸ್ಥಿತಿಗತಿಗಳನ್ನು ಕಣ್ಣಿಗೆ ಕಟ್ಟುವಂತೆ ಎಳೆ ಎಳೆಯಾಗಿ ಚಿತ್ರಿಸಿರುವುದನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಊರಿನ ತಳವಾರ ದೊಡ್ಡ ಬೀರ. ದರ್ಪದ ಮನುಷ್ಯ ಸೈಕಲ್ ಎಳೆಯಲು ಹೋಗಿ ಬಿದ್ದು ಕಾಲಿಗೆ ಏಟು ಆದಾಗ ಜಗುಲಿಯ ಮೇಲೆ ಮಲಗಿದ್ದಾನೆ. ದೇವಯ್ಯನಿಗೆ ಸೈಕಲ್ ಕಲಿಸುವಾಗ ದೊಡ್ಡಬೀರ ಮತ್ತು ಭಟ್ಟರು ಎತ್ತಿನಗಾಡಿಯಂತೆ ನೊಗಕ್ಕೆ ಹೆಗಲು ಕೊಟ್ಟು ತಿರುಗುವ ಸಂದರ್ಭವು ಜೀತದ ಹಾಗೂ ಶೋಷಣೆಯ ಕ್ರೌರ್ಯದ ಬಿಕ್ಕಟ್ಟುಗಳು ಯಾವ ರೀತಿ ಇದ್ದವು ಎಂಬುದನ್ನು ಕಾಣಬಹುದು. ನಂತರ ತನ್ನ ಗಂಡು ಮಕ್ಕಳು ಓಡಿಹೋದ ತಂಗಿಯನ್ನು ಊರುಸುತ್ತ ಹುಡುಕುತ್ತಾರೆ. ಕೊನೆಗೆ ಕಲ್ಲಯ್ಯಗೌಡರು ತಮ್ಮ ಮನೆಯ ಒಂದು ಜೀತದ ಹೆಣ್ಣಾಳು ಊರು ಬಿಟ್ಟು ಹೋದಳಲ್ಲ ಎಂದು ಆಕ್ರೋಶಗೊಳ್ಳುತ್ತಾರೆ. ಇಲ್ಲಿನ ಜೀತದಾಳುಗಳು ಅನುಭವಿಸುವ ಹಿಂಸೆಯು ಕಾದಂಬರಿಯಲ್ಲಿ ಹೃದಯ ವಿದ್ರಾವಕವಾಗಿ ಮೂಡಿಬಂದಿದೆ. ವಂಶ ಪರಂಪರೆಯಾಗಿ ಮೂಡಿಬಂದ ಜೀತುದಾಳುಗಳ ಶೋಷಣೆಗೆ ಕ್ರೌರ್ಯಕ್ಕೆ ಇದು ಸಾಕ್ಷಿಯಾಗಿದೆ.

ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು ಮಲೆನಾಡಿನ ಗ್ರಾಮೀಣ ಪ್ರದೇಶದ ಜನರ ಬದುಕನ್ನು ಚಿತ್ರಿಸುತ್ತವೆ. ಕಾದಂಬರಿಗಳಲ್ಲಿ ಒಕ್ಕಲಿಗರ ಬದುಕು ಬಹುಮುಖ್ಯವಾಗಿ ಕಂಡುಬಂದರೂ ಸಹ ಅದಕ್ಕೆ ಪೂರಕವಾಗಿರುವಂತೆ ದಲಿತರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ ಸಮುದಾಯಗಳ ಬದುಕು ಸಹ ಚಿತ್ರಿತವಾಗಿವೆ. ಕಾದಂಬರಿಕಾರರು ಮೂಲತಃ ಜಮೀನ್ದಾರ ಕುಟುಂಬದಿಂದ ಬಂದಿದ್ದರು ಸಹ ತಮ್ಮ ಕೃತಿಗಳಲ್ಲಿ ಒಕ್ಕಲಿಗರ (ಗೌಡರ) ಪರವಾಗಿ ಯಾವುದೇ ಘಟನೆಗಳನ್ನು ಚಿತ್ರಿಸಿಲ್ಲ. ಬದಲಿಗೆ ಒಕ್ಕಲಿಗ ಸಮುದಾಯದ ದರ್ಪ, ದೌರ್ಜನ್ಯ, ಶೋಷಣೆಗಳನ್ನು ಕಾದಂಬರಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಜಾತಿ ಮತ್ತು ಶೋಷಣೆಯ ನೆಲೆಗಳು ಕುವೆಂಪು ಕಾದಂಬರಿಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಸಮಾಜದಲ್ಲಿ ಬ್ರಾಹ್ಮಣರು ಮೇಲ್ವರ್ಗದವರು. ಸಮಾಜದಲ್ಲಿ ಅವರಿಗೆ ಅಗ್ರಸ್ಥಾನವಿದೆ. ಇವರಿಗಿಂತ ಕೆಳಸ್ಥರದವರು ಗೌಡರು. ಅವರ ಬಳಿ ಜೀತಗಾರಿಕೆ ಮಾಡುವ ಹೊಲೆಯರು,

ದೀವರು, ಬಿಲ್ಲವರು ಮುಂತಾದ ದಲಿತರು ಪ್ರಾಣಿಗಳಿಗಿಂತ ಕೀಳಾಗಿ ಬದುಕುತ್ತಿರುವುದನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಒಟ್ಟಾರೆಯಾಗಿ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕುವೆಂಪು ಅವರು ತಮ್ಮ ಸಾಹಿತ್ಯಕ ಕೃತಿಗಳ ಮೂಲಕ ಮೇಲಿನ ಕಾದಂಬರಿಗಳ ಅಪೂರ್ಣತೆಯನ್ನು ತುಂಬಾ ಯಶಸ್ವಿಯಾಗಿ ತುಂಬಿಕೊಡುತ್ತಾರೆ. ಇವರ ಇನ್ನಿತರ ಸಾಹಿತ್ಯ ಕೃತಿಗಳಾದ 'ಅಮಲನ ಕಥೆ', ಶೂದ್ರತಪಸ್ವಿ, ಬೆರಳ ಕೊರಳ್', 'ಜಲಗಾರ' ನಾಟಕಗಳು, 'ಸಾಲದ ಮಗು' ಕಥೆ ಹಾಗೂ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಮೂಲಕ ಕುವೆಂಪು ಅವರು ತಮ್ಮ ದಲಿತರ, ಜೀತದಾಳು ಪರ ನಿಲುವನ್ನು ವ್ಯಕ್ತಪಡಿಸಿದ್ದಾರೆ.

**ಕೊನೆಟಿಪ್ಪಣಿಗಳು**

1. *ಕನ್ನಡ ವಿಶ್ವಕೋಶ ಸಂಪುಟ-7* (1993). ಮೈಸೂರು ವಿಶ್ವವಿದ್ಯಾನಿಲಯ. ಪು.ಸಂ.807,
2. Misra and Puri. (1954). *Indian Economy*. Himalaya publishing house, Pp. 422.
3. ರಹಮತ್ ತರೀಕೆರೆ. (1993). *ಕುವೆಂಪು ಕಾದಂಬರಿಗಳಲ್ಲಿ ಸಂಘರ್ಷಗಳ ಸ್ವರೂಪ.* ಪ್ರತಿ ಸಂಸ್ಕೃತಿ ಕನ್ನಡ ಸಂಘ. ಪು.ಸಂ. 212.
4. ಕುವೆಂಪು. (2011). *ಕಾನೂರು ಹೆಗ್ಗಡತಿ.* ಉದಯರವಿ ಪ್ರಕಾಶನ. ಪು.ಸಂ. 67.
5. ಅದೇ., ಪು.ಸಂ.186.
6. ರಾಮಕೃಷ್ಣ ಜಿ. (1980). *ಜೀತಪದ್ಧತಿ ಒಂದು ಪಕ್ಷಿನೋಟ.* ಮುನ್ನೋಟ. ಸಹ್ಯಾದ್ರಿ ಪ್ರಕಾಶನ. ಪು.ಸಂ. 208.
7. ಕುವೆಂಪು. (2017). *ಮಲೆಗಳಲ್ಲಿ ಮದುಮಗಳು.* ಉದಯರವಿ ಪ್ರಕಾಶನ ಪು.ಸಂ.163.

**ಪರಾಮರ್ಶನ ಗ್ರಂಥಗಳು**


- ಅಮೂರ ಜಿ.ಎಸ್. (2004). *ಕುವೆಂಪು ಕಾದಂಬರಿಗಳಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ.* ಇಲ್ಲಿ ಗುರುಪಾದ ಮರಿಗುದ್ದಿ. (ಸಂ.). ಕುವೆಂಪು ಕಾದಂಬರಿಗಳು. ಸಹ್ಯಾದ್ರಿ ಪ್ರಕಾಶನ.
- ದೇಜಗೌ. (2004). *ಕುವೆಂಪು ಕಥನ ಶೈಲಿ.* ಇಲ್ಲಿ ಗುರುಪಾದ ಮರಿಗುದ್ದಿ. (ಸಂ.). ಕುವೆಂಪು ಕಾದಂಬರಿಗಳು. ಸಹ್ಯಾದ್ರಿ ಪ್ರಕಾಶನ.
- ಕರಿಗೌಡ ಬೀಚನಹಳ್ಳಿ. (2015). *ಕುವೆಂಪು ಮತ್ತು ದಲಿತ ಸಂವೇದನೆ.* ಅನಿಕೇತನ.
- ಕೃಷ್ಣಪ್ಪ ಬಿ. (2010). *ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಸಹ್ಯಾದ್ರಿಯ ಸೂರ್ಯ.* ಕನ್ನಡ ಸಾಹಿತ್ಯ ಪರಿಷತ್.
- ನಾಗರಾಜ್ ಡಿ.ಆರ್. (2009). *ಅಮೃತ ಮತ್ತು ಗರುಡ.* ಅಕ್ಷರ ಪ್ರಕಾಶನ.
- ನಾಗರಾಜು ಡಿ.ಆರ್. (2004). *ಕುವೆಂಪು ಕಾದಂಬರಿಗಳಲ್ಲಿ ವರ್ಣ-ವರ್ಗ-ಸಂಘರ್ಷ.* ಇಲ್ಲಿ ಗುರುಪಾದ ಮರಿಗುದ್ದಿ. (ಸಂ.). ಕುವೆಂಪು ಕಾದಂಬರಿಗಳು. ಸಹ್ಯಾದ್ರಿ ಪ್ರಕಾಶನ
- ರಹಮತ್ ತರೀಕೆರೆ. (2013). *ಪ್ರತಿ ಸಂಸ್ಕೃತಿ.* ಅಭಿನವ ಪ್ರಕಾಶನ.